# ಉಡುಗೊರೆ

■ ರವಿರಾಜ ಹಾಲಂಬಿ
ಕಲೆ: ಸಂತೋಷ್ ಸಸಿಹಿತ್ಲು



ಕಾಡಿನ ಕಡೆ
ನಡಿ ನಡಿ ನಡಿ
ನೋಡೋಣ ಅಲ್ಲಿ
ಹುಲಿ ಸಿಂಹ ಕರಡಿ

ಅಯ್ಯೋ ದೇವರೇ
ಇಲ್ಲಿಲ್ಲ ಕಾಡು
ಕಡಿದು ಮಾಡಿಹರು
ಮನೆ ಮಠ ಗೂಡು

ನಡಿ ನಡಿ ನಡಿ
ಏರುವ ಬೆಟ್ಟ
ತುತ್ತ ತುದಿಯಲಿ
ವಿಹಂಗಮ ನೋಟ

ಅಯ್ಯೋ ದೇವರೇ
ಅಲ್ಲಿಲ್ಲ ಬೆಟ್ಟ
ಮನುಷ್ಯನಾಶೆಗೆ
ಆಗಿದೆ ಮಟ್ಟ

ನಡೆ ನಡೆ ನಡೆ
ಆ ಹೊಳೆ ಕಡೆ
ಅಲ್ಲಿ ಆಡುತಿಹ
ಜಲಚರ ನೋಡೆ

ಅಯ್ಯೋ ದೇವರೇ
ಒಣಗಿದೆ ಹೊಳೆ
ಪರಿಸರ ನಾಶಕೆ
ಬರುತಿಲ್ಲ ಮಳೆ

ನಡೆ ನಡೆ ನಡೆ
ಉದ್ಯಾನದ ಕಡೆ
ವಾಯು ವಿಹಾರವು
ಆರೋಗ್ಯಕ್ಕೆಡೆ

ಅಯ್ಯೋ ದೇವರೇ
ಶುದ್ಧತೆ ಎಲ್ಲಿದೆ
ಹಸಿಕಸ ಒಣಕಸ
ಕೊಳೆತು ನಾರಿದೆ

ಬಿಡು ಬಿಡು ಬಿಡು
ಹಣದಾಸೆ ನೀ ಬಿಡು
ಕಾಡು ಬೆಟ್ಟಗಳ
ಅವಷ್ಟಕ್ಕೇ ಬಿಡು

ಪಶು ಪಕ್ಷಿಗಳ
ಬದುಕಲು ಬಿಡು
ಸಸ್ಯ ಶ್ಯಾಮಲೆಯ
ನಲಿದಾಡಲು ಬಿಡು

ಋತು ವೈಭವಗಳು
ಬರುವುದು ನೋಡು
ನಳನಳಿಸುವುದು
ಹಸಿರು ಸಿರಿ ಬೀಡು

ಪ್ರಕೃತಿ ಗಾನಕೆ
ನೀ ನಲಿದಾಡು
ಬರುವ ಪೀಳಿಗೆಗೆ
ಈ ಉಡುಗೊರೆ ನೀಡು ■

## ಕುಂಚ ಪ್ರಪಂಚ



**ಅಮೋಘ್ ಜಿ. ಮಂಟೂರ್**
7ನೇ ತರಗತಿ, ಚೇತನ್ ಪಬ್ಲಿಕ್ ಸ್ಕೂಲ್, ಹುಬ್ಬಳ್ಳಿ





**ಪ್ರಿಯಾ ಎ.**
9ನೇ ತರಗತಿ, ವಿಜಯ ವಿಠಲ ವಿದ್ಯಾಶಾಲಾ, ಮೈಸೂರು



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in